# ಸೆಲೆಬ್ರಿಟಿ

■ ಹನಿ

## ಓಪ್ರಾ ಸಂಪತ್ತು

'ಮಳೆ ನಿಂತರೂ ಮಳೆ ಹನಿ ನಿಂತಿಲ್ಲ' ಎನ್ನುವ ಹಾಗೆ, ಓಪ್ರಾ ವಿನ್‌ಫ್ರೇಯ ಟೀವಿ ಟಾಕ್ ಷೋ ನಿಂತಿದ್ದರೂ ಆಕೆಯ ಕುರಿತು ಜಗತ್ತು ಮಾತನಾಡುವುದನ್ನು ನಿಲ್ಲಿಸಿಲ್ಲ. 'ಫೋರ್ಬ್ಸ್' ಪತ್ರಿಕೆ ಈ ವಾರ ಪ್ರಕಟಿಸಿರುವ 'ಜಗತ್ತಿನ ಅತ್ಯಂತ ಹೆಚ್ಚು ಆದಾಯ ಗಳಿಕೆಯ ಸೆಲೆಬ್ರಿಟಿ'ಗಳ ಪಟ್ಟಿಯಲ್ಲಿ ಓಪ್ರಾ ಮೊದಲ ಸ್ಥಾನ ಗಳಿಸಿದ್ದಾರೆ. ಸತತ ನಾಲ್ಕನೇ ವರ್ಷ ಈ ಪಟ್ಟ ಓಪ್ರಾಗೆ ಸಂದಿದೆ. 2011ರ ಮೇ ತಿಂಗಳಿಂದ 2012ರ ಮೇ ತಿಂಗಳವರೆಗೆ ಓಪ್ರಾ ಗಳಿಸಿದ ಆದಾಯ 165 ದಶಲಕ್ಷ ಅಮೆರಿಕನ್ ಡಾಲರ್‌ಗಳು! ಆಕೆಗೆ ಹಣದ ಹೊಳೆಯನ್ನೇ ಹರಿಸುತ್ತಿದ್ದ ಟೀವಿ ಟಾಕ್ ಷೋಅನ್ನು ಕಳೆದ ವರ್ಷವೇ ನಿಲ್ಲಿಸಲಾಗಿದೆ. ಹೀಗಾಗಿ ಕಳೆದ ವರ್ಷಕ್ಕಿಂತ ಈಕೆಯ ಆದಾಯ ಈ ವರ್ಷ 125 ದಶಲಕ್ಷ ಡಾಲರ್ ಕಡಿಮೆಯಾಗಿದೆ. ಅಷ್ಟಾಗಿಯೂ ಈ ವರ್ಷವೂ ಆದಾಯ ಗಳಿಕೆಯಲ್ಲಿ ಓಪ್ರಾ ಜಗತ್ತಿನಲ್ಲೇ ಮೊದಲ ಸ್ಥಾನ ಗಳಿಸಿರುವುದು ಕುತೂಹಲಕರ.



ಅಮೆರಿಕದ ಸಂಸ್ಥಾನ, ಮಿಸಿಸಿಪಿಯ ಬಡ, ಗ್ರಾಮೀಣ ಕುಟುಂಬವೊಂದರಲ್ಲಿ 'ಸಿಂಗಲ್ ಪೇರೆಂಟ್' ಮಗಳಾಗಿ ಹುಟ್ಟಿ ಪಡಬಾರದ ಕಷ್ಟ ಪಟ್ಟ ಓಪ್ರಾ, ಹೈಸ್ಕೂಲ್‌ನಲ್ಲಿರುವಾಗಲೇ ಖಾಸಗಿ ರೇಡಿಯೋ ಒಂದರಲ್ಲಿ ಕೆಲಸ ಗಿಟ್ಟಿಸಿ ಕೊಂಡು ಪ್ರತಿಕೂಲ ಪರಿಸ್ಥಿತಿಯಲ್ಲೂ ಗಟ್ಟಿಗತನ ತೋರಿಸಿ ಸ್ವಂತ ಸಾಮರ್ಥ್ಯದಿಂದ ಬೆಳೆದಾಕೆ. ಟೀವಿ ಟಾಕ್ ಷೋ ನಿಲ್ಲಿಸಿದ ಬಳಿಕವೂ ತನ್ನ ಸ್ವಂತ ಟೀವಿ ನೆಟ್‌ವರ್ಕ್, ರೇಡಿಯೊ ಚಾನೆಲ್ ಮತ್ತು ಮ್ಯಾಗಸಿನ್‌ನ ಕೆಲಸದಲ್ಲಿ ಬಿಡುವಿಲ್ಲದ ದುಡಿಮೆ ಆಕೆಯದ್ದು. ಹಾಗೆ ನೋಡಿದರೆ ಅಮೆರಿಕದಲ್ಲಿ ಓಪ್ರಾ ವಿನ್‌ಫ್ರೇ ಅನ್ನುವುದೇ ಒಂದು ಬ್ರ್ಯಾಂಡ್ ಆಗಿ ಬೆಳೆದಿದೆ. ಆಕೆಯ ಒಡೆತನದ ಹಾರ್ಪೋ ಪ್ರೊಡಕ್ಷನ್‌ನ ಸೀರಿಯಲ್‌ಗಳಾದ ಡಾ.ಫಿಲ್, ರಾಚೆಲ್ ರೇ ಮತ್ತು ಡಾ.ಓಝ್ ಷೋಗಳ ಮೂಲಕ ಈಗಲೂ ಅತ್ಯಧಿಕ ಆದಾಯ ಬರುತ್ತಿದೆ. 'ಓ ಮ್ಯಾಗಸಿನ್' ಅಂತೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚುತ್ತಿದೆ. ಸ್ವಂತ ರೇಡಿಯೋದಲ್ಲಿ ಈಗಲೂ ಓಪ್ರಾ ಮಾತುಕತೆಗೆ ಕೂರುತ್ತಾರೆ. ಮಾಧ್ಯಮ ಧಣಿ, ಸಿನಿಮಾ ನಟಿ, ನಿರ್ಮಾಪಕಿ, ಟೀವಿ ನಿರೂಪಕಿ– ಹೀಗೆ ಏನೆಲ್ಲವೂ ಆಗಿರುವ ಈ 58ರ ಹರೆಯದ ಕೃಷ್ಣ ಸುಂದರಿ, ಜಗತ್ತಿನ ಏಕೈಕ 'ಕಪ್ಪು ವರ್ಣೀಯ ಬಿಲಿಯಾಧಿಪತಿ' ಎಂದೂ ಹೇಳಲಾಗುತ್ತದೆ. ಕ್ಯಾಲಿಫೋರ್ನಿಯಾದಲ್ಲಿ ಹೊಂದಿರುವ 42 ಎಕರೆ ವಿಸ್ತೀರ್ಣದ 'ದಿ ಪ್ರಾಮಿಸ್ಡ್ ಲ್ಯಾಂಡ್' ಎಸ್ಟೇಟ್‌ನಲ್ಲಿ ಗೆಳೆಯ ಸ್ಟೆಡ್‌ಮನ್ ಗ್ರಹಾಂ ಜತೆಗೆ 1986ರಿಂದಲೂ ಸುಖಸಂಸಾರ ನಡೆಸಿರುವ ಓಪ್ರಾ, ಫೋರ್ಬ್ಸ್ ಬಿಲಿಯಾಧೀಶರ ಪಟ್ಟಿಯಲ್ಲಿ ಮೈಕೆಲ್ ಬೇ, ಸ್ಟೀವನ್ ಸ್ಪಿಲ್‌ಬರ್ಗ್ ಮುಂತಾದ ಹಾಲಿವುಡ್‌ನ ಖ್ಯಾತನಾಮರನ್ನೂ ಹಿಂದಿಕ್ಕಿದ್ದಾರೆ.

ಓಪ್ರಾ ದಾನ ಧರ್ಮದಲ್ಲೂ ಎತ್ತಿದ ಕೈ. ಓಪ್ರಾ ಏಂಜೆಲ್ ನೆಟ್‌ವರ್ಕ್ ಎಂಬ ದತ್ತಿ ಸಂಸ್ಥೆ ಮೂಲಕ 80 ಕೋಟಿ ಡಾಲರ್ ದಾನ ಮಾಡಿದ್ದಳು. ಸಂಸ್ಥೆ 2 ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದರೂ ಈಕೆಯ ದಾನ ಕಾರ್ಯಗಳು ನಿಂತಿಲ್ಲ. ಜಗತ್ತಿನ ಅತ್ಯಂತ ಹೆಚ್ಚು ದಾನ ಮಾಡುವವರ ಪಟ್ಟಿಯಲ್ಲೂ ಈಕೆಗೆ 32ನೇ ಸ್ಥಾನ ಇದೆ. ಈಗಾಗಲೆ 9ಕ್ಕೂ ಹೆಚ್ಚು ಬಾಳಸಂಗಾತಿಗಳನ್ನು ಬದಲಿಸಿರುವ ಓಪ್ರಾ, ಈಗಿನ ಗೆಳೆಯ ಸ್ಟೆಡ್‌ಮನ್ ಗ್ರಹಾಂ ಜತೆ 1992ರ ನವೆಂಬರ್‌ನಲ್ಲೇ ಮದುವೆ ಆಗುವುದಾಗಿ ಪ್ರಕಟಿಸಿದ್ದರೂ ಆ ಮದುವೆ ಇನ್ನೂ ನಡೆದಿಲ್ಲ! ಹಾಗೆಂದು ಅವರ ನಡುವಣ ಅನ್ಯೋನ್ಯತೆಗೇನೂ ಭಂಗ ಬಂದಿಲ್ಲ.



## ಉನ್ಮತ್ತ ಕ್ರಿಕೆಟಿಗ!

ಉನ್ಮುಕ್ತ್ ಚಂದ್ ಎನ್ನುವ ಹೆಸರೇ ವಿಭಿನ್ನವಾಗಿದೆ. 19ರ ಒಳಗಿನ ಭಾರತ ಕ್ರಿಕೆಟ್ ತಂಡದ ನಾಯಕನಾದ ಈ ಚಂದ್, ಈಗ ಭಾರತ ಜೂನಿಯರ್ ಕ್ರಿಕೆಟ್ ವಿಶ್ವಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿ, ರಾತ್ರಿ ಬೆಳಗಾಗುವುದರೊಳಗೆ ತಾರೆಯಾಗಿದ್ದಾನೆ. ಆಸ್ಟ್ರೇಲಿಯಾವನ್ನು ಫೈನಲ್‌ನಲ್ಲಿ ಬಗ್ಗುಬಡಿಯುವಲ್ಲಿ ಈತ ಗಳಿಸಿದ 111 ರನ್ ನಿರ್ಣಾಯಕವಾಯಿತು. ದೆಹಲಿಯ ಮಧ್ಯಮವರ್ಗದ ಕುಟುಂಬದಿಂದ ಬಂದ ಉನ್ಮುಕ್ತ್, 6ರ ಎಳೆಹರೆಯದಲ್ಲೇ ಕ್ರಿಕೆಟ್ ಬ್ಯಾಟ್ ಕೈಗೆತ್ತಿಕೊಂಡಾತ. ಮಾವನ ಬೆಂಬಲದಿಂದ ಸೂಕ್ತ ತರಬೇತಿ ಪಡೆಯುತ್ತಲೇ ಬೆಳೆದ ಈ ಹುಡುಗ, ಅಂಡರ್–15, ಅಂಡರ್ 16 ಮತ್ತು ಅಂಡರ್–19.. ಹೀಗೆ ಪ್ರತಿ ಭಾರತ ತಂಡದಲ್ಲೂ ಸ್ಥಾನ ಗಿಟ್ಟಿಸಿಕೊಂಡ. ಗೌತಮ್ ಗಂಭೀರ್‌ಗೆ ಕೋಚ್ ಆಗಿದ್ದ ಸಂಜಯ್ ಭಾರದ್ವಾಜ್ ತರಬೇತಿ ಹಾಗೂ ವಿರಾಟ್ ಕೊಹ್ಲಿ ಮಾರ್ಗದರ್ಶನ ಈತನ ಪ್ರತಿಭೆಗೆ ಇನ್ನಷ್ಟು ಸಾಣೆ ಹಿಡಿಸಿತು. ದೆಹಲಿ ರಣಜಿ ತಂಡದ ಆಟಗಾರನಾಗಿ ಐದು ರಣಜಿ ಪಂದ್ಯಗಳಲ್ಲಿ ಒಟ್ಟು 400 ರನ್ ಹೊಡೆದಿರುವ ಉನ್ಮುಕ್ತ್, ರೈಲ್ವೇಸ್ ವಿರುದ್ಧ ಹೊಡೆದ 151 ರನ್ ಕೂಡಾ ಆಕರ್ಷಕ ಇನಿಂಗ್ಸ್ ಆಗಿತ್ತು. ಅಂಡರ್–19 ನಲ್ಲಿ ಶ್ರೀಲಂಕಾ ವಿರುದ್ಧ ಅಜೇಯ 122 ರನ್ ಹೊಡೆದಿರುವುದು ಈತನ ಆಟದ ಗುಣಮಟ್ಟಕ್ಕೆ ಸಾಕ್ಷಿ. ಈಗಾಗಲೆ ಡೆಲ್ಲಿ ಡೇರ್ ಡೆವಿಲ್ಸ್ ಪರ ಐಪಿಎಲ್–4 ರಲ್ಲಿ ಆಡಿರುವ ಉನ್ಮುಕ್ತ್, ಇನ್ನೇನು ಭಾರತ ಸೀನಿಯರ್ ತಂಡಕ್ಕೂ ಆಯ್ಕೆ ಆಗುವುದು ನಿಶ್ಚಿತ.

ಇನ್ನೂ ಮೊದಲ ವರ್ಷದ ಪದವಿ ಓದುತ್ತಿರುವ ಉನ್ಮುಕ್ತ್ ಡೆಲ್ಲಿ ವಿಶ್ವ ವಿದ್ಯಾನಿಲಯದ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಿರುವುದೂ ದೊಡ್ಡ ಸುದ್ದಿಯಾಗಿದೆ. 'ಕ್ರಿಕೆಟ್‌ನಲ್ಲಿ ಎಷ್ಟೇ ರನ್ ಸರಾಸರಿ ಇರಬಹುದು; ಆದರೆ ನೀನು ಓದುತ್ತಿರುವ ಸೈಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ನಿನ್ನ ಅಟೆಂಡೆನ್ಸ್ ಕೇವಲ 33 ಪರ್ಸೆಂಟ್ ಇದೆ. ಪರೀಕ್ಷೆಗೆ ಬರೆಯಲು ನಿನಗೆ ಅವಕಾಶ ಕೊಡುವುದಿಲ್ಲ' ಎಂದಿದೆ ಡೆಲ್ಲಿ ಯೂನಿವರ್ಸಿಟಿ. ಅದರ ವಿರುದ್ಧ ಹೈಕೋರ್ಟಿಗೆ ಹೋಗಿರುವ ಉನ್ಮುಕ್ತ್‌ಗೆ ಮೇ ತಿಂಗಳಲ್ಲಿ ನಾಲ್ಕು ವಿಷಯಗಳ ಪೈಕಿ 2ರಲ್ಲಿ ಪರೀಕ್ಷೆ ಬರೆಯಲು ಕೋರ್ಟ್ ಅನುಮತಿ ನೀಡಿದೆ. ಹಾಗೆ ಬರೆದ ಪರೀಕ್ಷೆಯಲ್ಲಿ ಈತ ಪಡೆದ ಅಂಕಗಳನ್ನು ಬಹಿರಂಗ ಪಡಿಸಲು ಕೋರ್ಟ್ ಅನುಮತಿ ಸಿಕ್ಕಿಲ್ಲ. '12ನೇ ತರಗತಿಯಲ್ಲಿ ಈತ 74 ಪರ್ಸೆಂಟ್ ಅಂಕ ಗಳಿಸಿದ್ದಾನೆ. ನಿಜಕ್ಕೂ ಪ್ರತಿಭಾವಂತ. ಅಟೆಂಡೆನ್ಸ್ ನಿಯಮಗಳನ್ನು ಈತನಿಗಾಗಿ ಬದಲಾಯಿಸಿ' ಎಂದು ಈತನ ವಕೀಲರು ಕೋರಿದ್ದಾರೆ. ಆದರೆ ಯೂನಿವರ್ಸಿಟಿ 'ನಿಯಮ ಎಲ್ಲರಿಗೂ ಒಂದೇ' ಎಂದು ಹಠ ಹಿಡಿಯಿತು. ಈ ಅಂಕಣ ಓದುವ ಹೊತ್ತಿಗೆ ನಿಯಮ ಬದಲಾಗಿರಲೂ ಬಹುದು. ಅದು ಬದಲಾಗದಿದ್ದರೂ ಈತನ ಹಣೆಬರಹ ಬದಲಾಗುವುದಂತೂ ಖಂಡಿತ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65